# ನೀರು...

ಶಾಮಣ್ಣನವರ ಕಾರು ದೂಳು ಎಬ್ಬಿಸುತ್ತಾ ಮೇದರ ಕೇರಿಗೆ ಬಂದು ಮಾದೇಶನ ಹಟ್ಟಿಯ ಮುಂದೆ ನಿಂತಿತು. ಹಟ್ಟಿಯ ಮುಂದೆ ಬುಟ್ಟಿ ಹೆಣೆಯುತ್ತಾ ಕೂತಿದ್ದ ದೇಯಿ ಗರಿಗರಿ ಬಿಳಿ ಬಟ್ಟೆ ತೊಟ್ಟು ತನ್ನತ್ತಲೇ ಬರುತ್ತಿದ್ದ ಮಂದಿಯನ್ನು ಒಮ್ಮೆ ನೋಡಿ ತನ್ನ ಕಾಯಕ ಮುಂದುವರಿಸಿದಳು.

ಶಾಮಣ್ಣ, ವೀರಣ್ಣ, ಸೋಮಪ್ಪ ಮತ್ತಿತರರು ತಮ್ಮ ತಮ್ಮ ಕರವಸ್ತ್ರದಿಂದ ಮೂಗು ಮುಚ್ಚಿಕೊಂಡೇ ಹಟ್ಟಿಯತ್ತ ನಡೆದು ಬಂದರು. ಶಾಮಣ್ಣನವರು

